ಸಹಾಯಕ ಅಧ್ಯಾಪಕರನ್ನು ನೇಮಿಸಲು ಆಯಾ ಜೂನಿಯರ್ ಕಾಲೇಜಿನ ಪ್ರಾಂಶುಪಾಲರು ಅಧಿಕಾರ ಹೊಂದಿರುವರೇ ಅಥವಾ ಆಲ್ಲಿ ಸಹಾ ಡಿ.ಡಿ.ಪಿ.ಐಯವರೇ ನೇಮಕ ಮಾಡಬೇಕೇ ಎಂಬುದು ಸ್ಪಷ್ಟವಾಗಿ ನಮೂದಿತವಾಗಿಲ್ಲ ಪರಿಣಾಮವಾಗಿ, ಈ ಅನುಮಾನದಿಂದ ನೇಮಕ ವಿಳಂಬವಾಗುತ್ತಿದೆ. ವಿದ್ಯಾ ವರ್ಷದ ಕೊನೆಯ ದಿನಗಳಲ್ಲಿ ಅಧ್ಯಾಪಕರ ಕೊರತೆ ನೀಗಿಸಲು ಸರಕಾರ ಕ್ರಮ ಕೈಕೊಂಡಿದ್ದರೂ ಮೇಲಿನ ಸಂಶಯದಿಂದಾಗಿ ಕೆಲವೆಡೆ ಅಧ್ಯಾಪಕರ ನೇಮಕಾತಿ ಆಗಿಲ್ಲದಿರುವುದರಿಂದ ಸೃಷ್ಟೀಕರಣ ಕೊಡಲೆ ನೀಡಿ, ಅಧ್ಯಾಪಕರ ಶೀಘ್ರ ನೇಮಕವಾಗುವಂತೆ ಮಾಡಬೇಕಾಗಿ ಒತ್ತಾಯಿಸುತ್ತೇನೆ. ಹೀಗೆ ನೇಮಕ ವಾದವರ ಸೇವೆಯ ಅವಧಿ ಮಾರ್ಚಿ ೩೧ರ ತನಕ ಮಾತ್ರ ಇದೆ. ಜೂನಿಯರ್ ಕಾಲೇಜು, ಹೈಸ್ಕೂಲು ಗಳು ಏಪ್ರಿಲ್ ೧೦ರ ತನಕ ಕಾರ್ಯ ನಿರ್ವಹಿಸುವುದರಿಂದ, ನೇಮಕಗೊಂಡ ಅಧ್ಯಾಪಕರ ಸೇವಾವಧಿ ಯನ್ನು ಸಹ ಏಪ್ರಿಲ್ ೧೦ರ ತನಕ ಇರಗೊಡಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು) —ಸರ್ಕಾರಿ ಆದಿಸೂಚನೆ ಸಂಖ್ಯೆ : ಇಡಿ ೩೭೬ ಡಿ ಪಿ ಐ ೮೫, ದಿನಾಂಕ ೩೦-೧-೧೯೮೬ ರಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಮತ್ತು ಪ್ರೌಢಶಾಲಾ ಸಹಾಯಕ ಶಿಕ್ಷಕರುಗಳ ಹುದ್ದೆಗಳನ್ನು ಶೈಕ್ಷಣಿಕ ಹಿತದೃಷ್ಟಿಯಿಂದ, ತಾತ್ಕಾಲಿಕವಾಗಿ ಒಪ್ಪಂದದ ಮೇರೆಗೆ ದರ್ಜೆ ಮತ್ತು ನೇಮಕಾತಿ ನಿಯಮಾವಳಿಗಳ ಅನ್ವಯ, ನೇರ ನೇಮಕಾತಿಯಿಂದ ಆಯ್ಕೆಯನ್ನು ಕಾದಿರಿಸಿ ಸಂಬಂಧಪಟ್ಟ ಕಿರಿಯ ಕಾಲೇಜುಗಳ ಪ್ರಾಂಶುಪಾಲರಿಗೆ ಉಪನ್ಯಾಸಕರುಗಳನ್ನು ಮತ್ತು ಜಿಲ್ಲಾ ಉಪ ನಿರ್ದೇಶಕರುಗಳಿಗೆ ಪ್ರೌಢ ಶಾಲಾ ಸಹಾಯಕ ಶಿಕ್ಷಕರುಗಳಿಗೆ ಅಧಿಕೃತವಾಗಿ ನೇಮಕ ಮಾಡುವ ಬಗ್ಗೆ ಈಗಾಗಲೇ ಅಧಿಕಾರ ನೀಡಲಾಗಿದೆ.

ಸರ್ಕಾರ ಆದಿಸೂಚನೆ ಅಧಿನಿಯಮ ೨ (ಎ) ಕೆಳಗೆ ಕಾಣಿಸಿರುವ ಸೂಚನೆಯಲ್ಲಿ ನೇಮಕಾತಿ ಬಗ್ಗೆ ಸೂಕ್ತ ಅಧಿಕಾರಿಯಾರೆಂಬುದನ್ನು ತಿಳಿಸಲಾಗಿದೆ. ಒಪ್ಪಂದದ ನೇಮಕಾತಿಯು ಮಾರ್ಚ್ ೩೧ರ ತನಕ ಅಥವಾ ನೇಮಕಾತಿಯಿಂದ ಆಯ್ಕೆಗೊಂಡು ಹುದ್ದೆಗೆ ಹಾಜರಾಗುವ ತನಕ ಅದರಲ್ಲಿ ಯಾವುದು ಮುಂಚಿತವೋ ಅಲ್ಲಿಯತನಕ ಮುಂದುವರಿಸಲಾಗುವುದು.

ಆದಾಗ್ಯೂ, ಶೈಕ್ಷಣಿಕ ಅವಧಿಯ ಕೊನೆತನಕ ಒಪ್ಪಂದದ ಮೇರೆಗೆ ನೇಮಕಾತಿ ಹೊಂದಿರುವವರ ಸೇವಾವಧಿಯನ್ನು ವಿಸ್ತರಿಸುವ ಬಗ್ಗೆ ಯಾವುದೇ ಅಭ್ಯಂತರವಿಲ್ಲ. ಅಗತ್ಯವಿದ್ದಲ್ಲಿ ಅದರ ಬಗ್ಗೆ ಸೂಕ್ತ ನಿರ್ದೇಶನವನ್ನು ನೀಡಲಾಗುವುದು.

ಅಧಿಸೂಚನೆಯ ನಿಯಮಗಳು ಸುಸ್ಪಷ್ಟವಾಗಿದೆ. ಇದರಲ್ಲಿ ಯಾವುದೇ ರೀತಿಯ ಅನುಮಾನಕ್ಕೆ ಆಸ್ಪದವಿಲ್ಲ.

VI. ಗುಲ್ಬರ್ಗ–ಚಾವಡಾಪುರ–ಬಿಜಾಪುರ–ಬೆಳಗಾಂ–ರಸ್ತೆ ರಿಪೇರಿ ಬಗ್ಗೆ.

ಶ್ರೀ ಮಾಲಿಕಯ್ಯ ಗುತ್ತೇದಾರ್ (ಆಫಜಲ್‌ಪುರ).— ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯಲ್ಲಿ ಗುಲ್ಬರ್ಗಾ ಚಾವಡಾಪುರ ರಸ್ತೆ ಗುಲ್ಬರ್ಗಾ ಬಿಜಾಪುರ–ಬೆಳಗಾವಿ ಮುಖ್ಯ ರಸ್ತೆಯ ಭಾಗವಾಗಿದ್ದು, ಇಲ್ಲಿ ವಾಹನ ಸಂಚಾರ ಜಾಸ್ತಿಗೆ ಇರುತ್ತದೆ. ಆದರೆ ಈ ರಸ್ತೆಯ ಏನೇ ಕಿಲೋಮೀಟರಿನಿಂದ ಏನೇ ಕಿಲೋಮೀಟರ್‌ವರೆಗಿನ ಭಾಗವು ಕಚ್ಚಾ ರಸ್ತೆಯಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿರುತ್ತದೆ. ಈ ರಸ್ತೆ ಅತಿ ಮುಖ್ಯವಾದ ರಸ್ತೆಯಾಗಿರುವುದರಿಂದ ಮೇಲ್ಕಂಡ ಕಚ್ಚಾ ಭಾಗದ ರಸ್ತೆಯನ್ನು ಡಾಂಬರೀಕರಣ ಮಾಡಿಸಿದಲ್ಲಿ ಈ ರಸ್ತೆಯಲ್ಲಿ ಓಡಾಡುವ ಸಹಸ್ರಾರು ವಾಹನಗಳಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಉಪಯುಕ್ತವಾಗುವುದರಿಂದ ಇದನ್ನು ಕೂಡಲೇ ಈ ವರ್ಷದ ಅಂದಾಜು ಪಟ್ಟಿಯಲ್ಲಿ ಸೇರಿಸಿ ಸಾರ್ವಜನಿಕರಿಗಾಗುತ್ತಿರುವ ತೊಂದರೆಯನ್ನು ನಿವಾರಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ —(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು.—ಶ್ರೀ ಉಮರಬ್ಬನವರು ಮಾನ್ಯ ಸದಸ್ಯರು ಗೈರುಹಾಜರಿ.